'ಓಯ್, ಒಂದು ನಿಮಿಷ ಬಾ ಇಲ್ಲಿ' ಎಂದು ನನ್ನ ಹೆಂಡತಿಯನ್ನು ಹಾಲಿನೊಳಕ್ಕೆ ಕರೆದು ಅಮ್ಮನ ಚಿತ್ರವನ್ನು ತೋರಿಸಿದೆ.

'ಹೌದು. ರಾಟೆ ಬಾವಿ, ಹಾಲು ಬೆಳದಿಂಗಳು ಚೆನ್ನಾಗಿದೆ' ಎಂದಳು ನನ್ನ ಹೆಂಡತಿ.

ಅಷ್ಟರಲ್ಲೇ ವಠಾರದಲ್ಲಿ ಆಟವಾಡುತ್ತಿದ್ದ ಪುಟ್ಟ ಓಡಿ ಬಂದ. 'ಕಿತಾಬ್ ಕಿತಾಬ್' ಎಂದು ನನ್ನ ಶರಟನ್ನು ಎಳೆಯತೊಡಗಿದ.

'ಲೋ, ನೀನು ನೋಡಿದ ಪುಸ್ತಕ ಕಣೋ. ಸೈತಾನ್.'

ಪುಟ್ಟ ಕೇಳಲಿಲ್ಲ. ಅವನಿಗೆ ಪುಸ್ತಕ ಕೊಡೋವರೆಗೆ ಕೇಳುವುದಿಲ್ಲ. ಅವನು ತುಂಬಾ ಹಟಮಾರಿ. ಪುಸ್ತಕ ಕಣ್ಣಿಗೆ ಬಿದ್ದರೆ ಎಳೆದಾಡಿ ಬಿಡುತ್ತಾನೆ. ಅದರಲ್ಲಿ ಚಿತ್ರಗಳನ್ನು ನೋಡೋದು, ಆಟ ಆಡೋದು, ಪುಸ್ತಕವನ್ನು ಎಲ್ಲೆಲ್ಲೋ ಬಿಸಾಡುವುದು. ನಂತರ ಅದನ್ನು ಹುಡುಕಿ ಗಪ್‌ಚುಪ್ ಆಗಿ ಮತ್ತೆ ಅಟ್ಟಕ್ಕೇರಿಸುವುದು. ಅದಕ್ಕೆ ಅವನು ಕೇಳಿದ ತಕ್ಷಣ ಕೊಟ್ಟು ಬಿಡುತ್ತೇನೆ, 'ಪುಸ್ತಕ ಹರಿಯದಂತೆ ಆಡಿಕೋ' ಎಂದು ಅವನಿಗೆ ಅರ್ಥವಾಗುವಂತೆ ಹೇಳುತ್ತಾ.

ಅವನು ಪುಸ್ತಕ ತೆಗೆದುಕೊಂಡು ಹೊರಗೆ ಓಡಿದ. ಆದರೆ ಈ ವಿಷಯವನ್ನು ಇಲ್ಲಿಗೆ ಬಿಡಬಾರದೆಂದುಕೊಂಡೆ. 'ಅ' ಅಕ್ಷರಕ್ಕೆ 'ಅಮ್ಮನ' ಬದಲಾಗಿ ಅರ್ಥ ಬದಲಿಸಿ 'ಅರಸ' ಎಂದು ಬರೆದ ಬಾಪುಗೆ ಒಂದು ಖಾಸಗಿ ಪತ್ರವನ್ನು ಬರೆಯಬೇಕೆಂದುಕೊಂಡೆ. ಮುಂದಿನ ಶುಕ್ರವಾರ ಆ ಕೆಲಸ ಮಾಡೋಣ ಎಂದು ನಿರ್ಧರಿಸಿದೆ. ಪತ್ರಕ್ಕೆ ಸಂಬಂಧಿಸಿದಂತೆ ಟಿಪ್ಪಣಿ ಮಾಡಿಕೊಳ್ಳಲು ಕಪಾಟಿನಲ್ಲಿ ನೋಟ್ ಪುಸ್ತಕವನ್ನೂ ತೆರೆದಿಟ್ಟೆ. ನಾನು ಏನಾದರೂ ಬರೆಯಬೇಕೆಂದುಕೊಂಡಾಗ ಆ ರೀತಿ ಪುಸ್ತಕ ತೆರೆದಿಡುವುದು ನನಗೆ ಅಭ್ಯಾಸ. ತಲೆಗೆ ಏನಾದರೂ ಹೊಳೆದಾಗಲೆಲ್ಲ ಆ ರೀತಿ ತೆರೆದಿಟ್ಟ ಪುಸ್ತಕದಲ್ಲಿ ಬರೆದಿಟ್ಟುಬಿಡುತ್ತೇನೆ. ಆರಾಮಾಗಿ ವಾರದ ರಜೆ ದಿನ ಕೂತು ಫೇರ್ ಮಾಡುತ್ತೇನೆ. ಕಲಾವಿದ ಬಾಪು ಅವರಿಗೆ ಬರೆಯಲಿರುವ ಪತ್ರದಲ್ಲಿ ನನ್ನ ಭಾವನೆಗಳನ್ನು ಯಾವ ರೀತಿ ವ್ಯಕ್ತಪಡಿಸಬೇಕೆಂದು ಯೋಚಿಸುತ್ತಾ, ಒಂದು ಕ್ರಮದಲ್ಲಿ ನೋಟ್ಸ್ ಬರೆಯುತ್ತಾ ಬಂದಿದ್ದೆ. ಶುಕ್ರವಾರಕ್ಕೆ ಇನ್ನೂ ಎರಡು ದಿನಗಳು ಉಳಿದಿವೆ.

ಅಷ್ಟರಲ್ಲೇ ಈ ಘಟನೆ ನಡೆದಿತ್ತು.

ಪಕ್ಕದ ಮನೆ ಮಗು ಪಿಂಕಿ ಮತ್ತು ನಮ್ಮ ಪುಟ್ಟನ ನಡುವೆ ದೊಡ್ಡ ಜಗಳ ಆಯ್ತು. ಇಬ್ಬರೂ ಹೊಡೆದಾಡಿ, ಕೂದಲು ಜಗ್ಗಾಡಿದರು. ಆಫೀಸಿನಿಂದ ಬಂದು ಊಟ ಮಾಡಿ ಸ್ವಲ್ಪ ಹೊತ್ತು ಮಲಗಲು ಸಿದ್ಧವಾಗುತ್ತಿರಬೇಕಾದಾಗ ಈ ಘಟನೆ ನಡೆದಿತ್ತು. ಪಾರಿವಾಳಗಳು ರೆಕ್ಕೆ ಹೊಡೆದುಕೊಂಡಂತೆ ಟಪಟಪನೆ ಸದ್ದು ಕೇಳಿಸಿ ವಠಾರಕ್ಕೆ ಓಡಿಬಂದೆ. 'ಇಷ್ಟೊತ್ತಿನವರೆಗೆ ಇಬ್ರೂ ಚೆನ್ನಾಗಿ ಆಟ ಆಡ್ತಾ ಇದ್ರಿ. ಇಷ್ಟರಲ್ಲೇ ಏನಾಯ್ತಪ್ಪ' ಎಂದು ಅನುಮಾನಿಸುತ್ತಾ ನಿಂತೆ. ನನ್ನ ಅನುಮಾನ ನಿಜವಾಗಿತ್ತು. ಇಬ್ಬರೂ ಮಾರಾಮಾರಿ ಹೊಡೆದಾಡುತ್ತಿದ್ದರು. ಇಬ್ಬರ ನಡುವೆ ವರ್ಣಮಾಲೆ ಪುಸ್ತಕ ಹರಿದು ಚೂರು ಚೂರಾಗಿ ಬಿದ್ದಿತ್ತು.

ಎರಡು ದಿನಗಳ ಹಿಂದೆ ಪುಟ್ಟನಿಗೆ ಕೊಟ್ಟಿದ್ದ ವರ್ಣಮಾಲೆ ಪುಸ್ತಕವನ್ನು ವಾಪಸ್ ಪಡೆಯದೇ ಚಿತ್ರ ನೋಡುತ್ತಾ ಆಡಿಕೊಳ್ಳಲಿ ಬಿಡು ಎಂದು ಬಿಟ್ಟಿದ್ದಕ್ಕೆ ನನಗೆ ತಕ್ಕ ಶಾಸ್ತಿಯಾಯಿತೆಂದುಕೊಂಡೆ.

ನಾನು ಆ ಹುಡುಗಿಯನ್ನು ಏನೂ ಅನ್ನದೇ ಪುಟ್ಟನಿಗೆ ಬೆನ್ನಿನ ಮೇಲೆ ಒಂದು ಏಟು ಹಾಕಿ ಇಬ್ಬರನ್ನು ಬಿಡಿಸಿದೆ. ನಡುವೆ ಹರಿದು ಚೂರಾಗಿದ್ದ ಪುಸ್ತಕ ತೋರಿಸುತ್ತಾ, 'ಅರೆರೆ... ಚೆನ್ನದಂಥ ಪುಸ್ತಕವನ್ನು ಹಾಳು ಮಾಡಿಬಿಟ್ರಿ. ನಿಮ್ಮಿಬ್ಬರದು ಅತಿಯಾಯ್ತು' ಎಂದೆ. ಆ ಹುಡುಗಿ ಪೆಚ್ಚಾದಳು. ಸ್ವಲ್ಪ ಹೊತ್ತು ಸುಮ್ಮನಿದ್ದು,